# ಜಾಗತಿಕ ಕಾರ್ಮಿಕ ಮಾನದಂಡಗಳು

HUMAN RESOURCES LEGAL | ISSUED: March 1, 2019 – REVISED: February 23, 2022

## ಪರಿಚಯ:

ಮ್ಯಾಗ್ನ ಇಂಟರ್‌ನ್ಯಾಶನಲ್ ಇಂಕ್. ("ಮ್ಯಾಗ್ನ") ನಮ್ಮ ವ್ಯಾಪಾರ ಉದ್ದೇಶಗಳೊಂದಿಗೆ ನಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಸಮತೋಲನಗೊಳಿಸುವ ಪ್ರಾಮುಖ್ಯತೆಯನ್ನು ಗುರುತಿಸುತ್ತೇವೆ. ನಮ್ಮ ಕೆಲಸಗಳು ಷೇರುದಾರ, ಗ್ರಾಹಕ, ಉದ್ಯೋಗಿ, ನಮ್ಮ ವ್ಯಾಪಾರಿ ಸಮುದಾಯ, ಸರ್ಕಾರ ಮತ್ತು ಇತರ ಕಡೆಗಳಲ್ಲಿ, ವಿಶೇಷವಾಗಿ ನಮ್ಮ ಉದ್ಯೋಗಿಗಳ ನ್ಯಾಯಯುತ ಮತ್ತು ನೈತಿಕ ನಡಾವಳಿಗೆ ಸಂಬಂಧಿಸಿದ ವಿವಿಧ ಪಾಲುದಾರರ ನಿರೀಕ್ಷೆಗಳಿಗೆ ಅನುಗುಣವಾಗಿ ಇರಬೇಕು ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಈ ನೀತಿ ಮ್ಯಾಗ್ನದ ಎಲ್ಲಾ ಕಾರ್ಯಾಚರಣ ಗುಂಪು, ವಿಭಾಗ ಮತ್ತು ಇತರ ಎಲ್ಲ ಜಾಗತಿಕವಾಗಿ ಕಾರ್ಯಾಚರಣೆಗಳಿಗೆ ಅನ್ವಯ ಆಗುತ್ತದೆ. ಈ ನೀತಿ Magnaದ ಪರವಾಗಿ ಕಾರ್ಯನಿರ್ವಹಿಸುವ ಉದ್ಯೋಗಿ, ಅಧಿಕಾರಿ, ನಿರ್ದೇಶಕರು, ಸಲಹೆಗಾರರು ಮತ್ತು ಏಜೆಂಟರು ಸೇರಿದಂತೆ ಪ್ರತಿಯೊಬ್ಬರಿಗು ಅನ್ವಯ ಆಗುತ್ತದೆ.

ನಾವು "ಫೇರ್ ಎಂಟರ್‌ಪ್ರೈಸ್" ಎಂದು ಹೇಳುವ ಮ್ಯಾಗ್ನದ ವಿಶಿಷ್ಟ ಕಾರ್ಯಾಚರಣ ವಿಧಾನವು ವ್ಯಕ್ತಿಗಳಿಗೆ ಮತ್ತು ನಮ್ಮ ಉದ್ಯೋಗಿಗಳ ಅಗತ್ಯಗಳಿಗೆ ನಮಗಿರುವ ಗೌರವವನ್ನು ತೋರಿಸುತ್ತದೆ. ನಮ್ಮ ಮೂಲಾಧಾರ ಪಾಲಿಸಿಗಳಾದ ಮ್ಯಾಗ್ನ ಉದ್ಯೋಗಿ ಚಾರ್ಟರ್, ಮ್ಯಾಗ್ನ ಕಾರ್ಯಾಚರಣ ತತ್ವಗಳು ಮತ್ತು ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿಗಳಲ್ಲಿ ಮೂಲಭೂತ ಹಕ್ಕು ಮತ್ತು ಕಟ್ಟುಪಾಡುಗಳ ಸಹಿತವಾಗಿ ನಮ್ಮ ವ್ಯಾಪಾರದಲ್ಲಿ ಪ್ರಮುಖ ಪಾಲುದಾರರಾಗಿ ನಮ್ಮ ಫೇರ್ ಎಂಟರ್‌ಪ್ರೈಸ್ ವ್ಯವಹಾರ ಮಾದರಿಯು ಉದ್ಯೋಗಿಗಳನ್ನು ಗುರುತಿಸುತ್ತದೆ.

ಈ ಜಾಗತಿಕ ಕಾರ್ಮಿಕ ಮಾನದಂಡಗಳು ನಮ್ಮ ಫೇರ್ ಎಂಟರ್‌ಪ್ರೈಸ್ ಮಾದರಿಯ ಮುಂದುವರಿದ ಭಾಗವಾಗಿದ್ದು, ಅವು ಕೆಳಗಿನ ಚೌಕಟ್ಟು ಮತ್ತು ಚಾರ್ಟರ್‌ಗಳ ಸಾಮಾನ್ಯ ಅನುಮೋದನೆಗಳಾಗಿ ಕಾರ್ಯನಿರ್ವಹಿಸುತ್ತವೆ:

- UN ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆ
- ILO ಮೂಲಭೂತ ಸಮಾವೇಶಗಳು
- ILO ಮೂಲಭೂತ ತತ್ವಗಳು ಮತ್ತು ಕೆಲಸದ ಹಕ್ಕುಗಳ ಘೋಷಣೆ

ನಮ್ಮ ಕಂಪನಿಯ ನೀತಿ ಚೌಕಟ್ಟು ದೇಶ/ರಾಜ್ಯದ ನಿರ್ದಿಷ್ಟ ಶಾಸನಗಳು, ಹಾಗೆ ವಿವಿಧ ಕಾರ್ಮಿಕ ಒಪ್ಪಂದ, ಸುಂಕ ಮತ್ತು ಸ್ಥಳೀಯ ಕರಾರಿನ ಕಟ್ಟುಪಾಡುಗಳು ಸೇರಿದಂತೆ ವಿವಿಧ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳ ಅಡಿಯಲ್ಲಿನ ಮೂಲಭೂತ ತತ್ವಗಳ ಮೇಲೆ ಆಧಾರಿತವಾಗಿದೆ.

## ಮಾನವ ಹಕ್ಕುಗಳು:

ಅಂತರಾಷ್ಟ್ರೀಯವಾಗಿ ಒಪ್ಪಲಾದ ಮಾನವ ಹಕ್ಕುಗಳ ಅನುಸರಣೆಯನ್ನು ನಾವು ಬೆಂಬಲಿಸುತ್ತೇವೆ. ವೈಯಕ್ತಿಕ ಗುಣಲಕ್ಷಣಗಳನ್ನು ಲೆಕ್ಕಿಸದೆ ಎಲ್ಲರನ್ನು ಸಮಾನವಾಗಿ ನೋಡುವ ಮತ್ತು ಎಲ್ಲರಿಗು ನ್ಯಾಯಯುತ ಉದ್ಯೋಗಾವಕಾಶಗಳನ್ನು ಒದಗಿಸುವ ಅಗತ್ಯತೆಯನ್ನು ನಮ್ಮ ನೀತಿಗಳು ಗೌರವಿಸುತ್ತವೆ. ನಮ್ಮ ವೈವಿಧ್ಯಮಯ ಮತ್ತು ಮಲ್ಟಿಕಲ್ಚರ್ ಕೆಲಸದ ಜಾಗಗಳು ನಮ್ಮ ಉದ್ಯೋಗಿಗಳಿಗೆ ಸುರಕ್ಷಿತ ಮತ್ತು ಸ್ವಾಗತಾರ್ಹ ಎನ್ನಿಸುವ ಜೊತೆಗೆ, ಎಲ್ಲರಿಗು ಅಲ್ಲಿ ವೈಯಕ್ತಿಕ ಮತ್ತು ವೃತ್ತಿಪರ ಬೆಳವಣಿಗೆಗೆ ಅವಕಾಶಗಳಿರುವ ಗೌರವಯುತ ಕೆಲಸದ ವಾತಾವರಣವನ್ನು ಒದಗಿಸುತ್ತವೆ ಎಂಬುದನ್ನು ನಾವು ನಂಬಿದ್ದೇವೆ.

## ಕಿರುಕುಳ, ತಾರತಮ್ಯ ಮತ್ತು ಹಿಂಸಾಚಾರದಿಂದ ರಕ್ಷಣೆ:

ಮ್ಯಾಗ್ನದ ಕಿರುಕುಳ ಮತ್ತು ತಾರತಮ್ಯ ನೀತಿಗಳ ಪ್ರಕಾರ, ಜನಾಂಗ, ರಾಷ್ಟ್ರೀಯತೆ ಅಥವಾ ಸಾಮಾಜಿಕ ಮೂಲ, ಬಣ್ಣ, ಲಿಂಗ, ಧರ್ಮ, ಅಂಗವೈಕಲ್ಯ, ಲೈಂಗಿಕತೆ ಅಥವಾ ಕಾನೂನಿನ ಅಡಿ ಅನ್ವಯವಾಗುವ ಇತರ ಯಾವುದೇ ಸಂರಕ್ಷಿತ ನೆಲೆಯ ಆಧಾರದಲ್ಲಿ ನಮ್ಮ ಕೆಲಸದ ಜಾಗಗಳಲ್ಲಿ ಕಿರುಕುಳ ಅಥವಾ ತಾರತಮ್ಯವನ್ನು ನಾವು ಸಹಿಸುವುದಿಲ್ಲ. ನಾವು ಕೆಲಸದ ಜಾಗದಲ್ಲಿ ಹಿಂಸಾಚಾರ ಮತ್ತು ಕುಚೇಷ್ಟೆ ಮಾಡುವುದನ್ನು ನಿಷೇಧಿಸುವ ನೀತಿಗಳನ್ನು ಹೊಂದಿದ್ದೇವೆ. ನಮ್ಮ ಉದ್ಯೋಗಿ ಚಾರ್ಟರ್‌ನ ತತ್ವಗಳ

ಅನುಸಾರವಾಗಿ, ಯಾವುದೇ ಪಕ್ಷಪಾತ ಮಾಡದೆ ಮತ್ತು ಯಾವುದೇ ರೀತಿಯ ದೈಹಿಕ, ಲೈಂಗಿಕ, ಮಾನಸಿಕ ಅಥವಾ ಮೌಖಿಕ ನಿಂದನೆಗಳಿಂದ ಮುಕ್ತವಾದ ನ್ಯಾಯಯುತ ಮತ್ತು ಗೌರವಾನ್ವಿತ ಕೆಲಸದ ಜಾಗವನ್ನು ನಿರ್ಮಾಣ ಮಾಡಲು ನಾವು ಶ್ರಮಿಸುತ್ತೇವೆ.

## ಮಕ್ಕಳ ಹಕ್ಕುಗಳು:

ನಾವು ಬಾಲ ಕಾರ್ಮಿಕ ಪದ್ಧತಿಯನ್ನು ಖಂಡಿಸುತ್ತೇವೆ ಹಾಗೂ ಮಕ್ಕಳ ಶಿಕ್ಷಣ, ವಿಶ್ರಾಂತಿ ಮತ್ತು ಆಟದ ಹಕ್ಕನ್ನು ಗೌರವಿಸುತ್ತೇವೆ. ಉದ್ಯೋಗ ಅಥವಾ ಕೆಲಸ ಮಾಡಲು ಹೊಂದಿರಬೇಕಾದ ಕನಿಷ್ಠ ವಯಸ್ಸಿನ ಬಗ್ಗೆ ಅನ್ವಯವಾಗುವ ಎಲ್ಲಾ ಅಂತರರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನು ಮತ್ತು ನಿಬಂಧನೆಗಳನ್ನು ನಾವು ಗೌರವಿಸುತ್ತೇವೆ.

## ಸ್ವತಂತ್ರವಾಗಿ ಆಯ್ಕೆ ಮಾಡಿದ ಉದ್ಯೋಗ:

ನಾವು ಎಲ್ಲಾ ರೀತಿಯ ಒತ್ತಾಯದ ಅಥವಾ ಕಡ್ಡಾಯ ಕಾರ್ಮಿಕ ಪದ್ಧತಿಯನ್ನು ತಿರಸ್ಕರಿಸುತ್ತೇವೆ. ಉದಾಹರಣೆಗೆ ಜೈಲು ಕಾರ್ಮಿಕರು, ಸಾಲದ ಜೀತ, ಕಳ್ಳಸಾಗಣೆ ಅಥವಾ ಜೀತದಾಳು ಪದ್ಧತಿ. ಒತ್ತಾಯದ ಕಾರ್ಮಿಕ ಪದ್ಧತಿಯನ್ನು ಹೊಂದಿದ ಪೂರೈಕೆದಾರ, ನೇಮಕಾತಿದಾರ ಅಥವಾ ಸಿಬ್ಬಂದಿ ಏಜೆನ್ಸಿಗಳೊಂದಿಗೆ ಮ್ಯಾಗ್ನ ಅಂಗಸಂಸ್ಥೆಗಳು ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವುದಿಲ್ಲ. ಮ್ಯಾಗ್ನ ಸ್ವತಂತ್ರವಾಗಿ ಆಯ್ಕೆ ಮಾಡಿದ ಉದ್ಯೋಗದ ತತ್ವವನ್ನು ಗೌರವಿಸುತ್ತದೆ.

## ಆರೋಗ್ಯ ಮತ್ತು ಸುರಕ್ಷತೆ:

ನಾವು ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯಕ್ಕಾಗಿ ಸಂಬಂಧಪಟ್ಟ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾನದಂಡಗಳನ್ನು ಪೂರೈಸುವ ಅಥವಾ ಮೀರಿದ ಸುರಕ್ಷಿತ ಮತ್ತು ಆರೋಗ್ಯಕರ ಕೆಲಸದ ಜಾಗಗಳನ್ನು ನಿರ್ವಹಿಸುತ್ತೇವೆ. ನಿಯಮಿತವಾಗಿ ನಾವು ನಮ್ಮ ಮಾನದಂಡಗಳನ್ನು ಪರಿಶೀಲಿಸುತ್ತೇವೆ ಮತ್ತು ಸಂಪೂರ್ಣ ಸೌಲಭ್ಯ ಲೆಕ್ಕಪರಿಶೋಧನೆ ಮತ್ತು ತಪಾಸಣೆಗಳ ಮೂಲಕ ಈ ಆಯಾಮದಲ್ಲಿ ನಿರಂತರ ಸುಧಾರಣೆಗೆ ಬದ್ಧರಾಗಿದ್ದೇವೆ.

## ನ್ಯಾಯೋಚಿತ ಕೆಲಸದ ಪರಿಸ್ಥಿತಿಗಳು:

ನಾವು ನಮ್ಮ ಉದ್ಯೋಗಿಗಳ ಸೂಕ್ತ ವಿಶ್ರಾಂತಿಯ ಮತ್ತು ವಿರಾಮದ ಸಮಯದ ಹಕ್ಕನ್ನು ಅನುಮೋದಿಸುತ್ತೇವೆ. ನಾವು ನಮ್ಮ ಉದ್ಯೋಗಿಗಳ ಆರೋಗ್ಯ ಮತ್ತು ಯೋಗಕ್ಷೇಮವನ್ನು ಕಾಪಾಡಲು ಉದ್ಯಮದೊಳಗೆ ಅನುಸರಿಸಿಕೊಂಡು ಬಂದಿರುವ ಸರಿಯಾದ ರೀತಿಯ ಕೆಲಸದ ಸಮಯವನ್ನು ಒದಗಿಸುತ್ತೇವೆ. ಕೆಲಸದ, ವಿರಾಮದ ಸಮಯ, ರಜಾದಿನ, ಮತ್ತು ಅಧಿಕ ಕೆಲಸದ ಅವಧಿಗಳಿಗೆ ಸಂಬಂಧಿಸಿದಂತೆ ಅನ್ವಯವಾಗುವ ಎಲ್ಲಾ ಸ್ಥಳೀಯ ಕಾನೂನುಮತ್ತು ನಿಬಂಧನೆಗಳ ಅವಶ್ಯಕತೆಗಳನ್ನು ಅನುಸರಿಸಲು ಅಥವಾ ಅವುಗಳನ್ನು ಮೀರಿಸಲು ನಾವು ಪ್ರಯತ್ನಿಸುತ್ತೇವೆ.

## ತಾರತಮ್ಯರಹಿತ ಪರಿಹಾರ ಪದ್ಧತಿಗಳು:

ನಾವು ನಮ್ಮ ಮ್ಯಾಗ್ನ ಉದ್ಯೋಗಿಗಳ ಚಾರ್ಟರ್ ತತ್ವಗಳಿಗೆ ಅನುಗುಣವಾಗಿ, ನಮ್ಮ ಉದ್ಯೋಗಿಗಳಿಗೆ ಸ್ಪರ್ಧಾತ್ಮಕ ವೇತನ ಮತ್ತು ಪ್ರಯೋಜನಗಳನ್ನು ಒದಗಿಸಲು ಬದ್ಧರಾಗಿದ್ದೇವೆ. ಅದು ಆಂತರಿಕವಾಗಿ ನ್ಯಾಯಸಮ್ಮತವಾಗಿರುವಂತೆ ಮತ್ತು ನಾವು ವ್ಯಾಪಾರ ನಡೆಸುವ ಉದ್ಯಮ ಮತ್ತು ಸ್ಥಳೀಯ ಕಾರ್ಮಿಕ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕವಾಗಿರುವಂತೆ ನೋಡಿಕೊಳ್ಳಲಾಗುತ್ತದೆ. ಕೌಶಲ್ಯ ಹಾಗೂ ಸಾಮರ್ಥ್ಯ, ವಿದ್ಯಾರ್ಹತೆ, ಕೆಲಸದಲ್ಲಿನ ಕಾರ್ಯಕ್ಷಮತೆ ಮತ್ತು ಸೇವೆಯ ಅವಧಿಯ ವಿಷಯಗಳಲ್ಲಿ ವಸ್ತುನಿಷ್ಠವಾಗಿ ಮತ್ತು ತಾರತಮ್ಯ ಮಾಡದೆ ಉದ್ಯೋಗಿಗಳಿಗೆ ಪರಿಹಾರವನ್ನು ಒದಗಿಸುವುದನ್ನು ಒಳಗೊಂಡಿದೆ. ನಮ್ಮ ಪರಿಹಾರ ಕ್ರಮಗಳು ವಿವಿಧ ಕರಾರು, ಕಾರ್ಮಿಕ ಒಪ್ಪಂದ ಮತ್ತು ಸುಂಕದ ಅವಶ್ಯಕತೆಗಳನ್ನು ಒಳಗೊಂಡಂತೆ ರಾಷ್ಟ್ರ, ರಾಜ್ಯ ಮತ್ತು/ಅಥವಾ ಸ್ಥಳೀಯ ಕಾನೂನು ಮತ್ತು ನಿಬಂಧನೆಗಳಿಗೆ ಅನುಗುಣವಾಗಿರುತ್ತವೆ. ದೇಶದ ನಿರ್ದಿಷ್ಟ ಪರಿಹಾರಕ್ಕೆ ಸಂಬಂಧಪಟ್ಟ ಕಾನೂನು ಮತ್ತು ಕರಾರಿನ ಅವಶ್ಯಕತೆಗಳ ಸಂದರ್ಭದಲ್ಲಿ, ಲಿಂಗದ ಆಧಾರದಲ್ಲಿ ತಾರತಮ್ಯ ಮಾಡದೆ ನಾವು ಸಮಾನ ಸಂಭಾವನೆಯ ತತ್ವವನ್ನು ಬೆಂಬಲಿಸುತ್ತೇವೆ.

## ಒಡಂಬಡಿಕೆಯ ಸ್ವಾತಂತ್ರ್ಯ ಮತ್ತು ಉತ್ತಮ ಉದ್ದೇಶದಿಂದ ತೆಗೆದುಕೊಂಡ ಒಗ್ಗಟಿನ ನಿರ್ಧಾರ:

ಸ್ಥಳೀಯ ಕಾನೂನು ಮತ್ತು ನಿಬಂಧನೆಗಳಿಗೆ ಅನುಸಾರವಾಗಿ ಮತ್ತು ಸಂಬಂಧಪಟ್ಟ ನ್ಯಾಯವ್ಯಾಪ್ತಿಯಲ್ಲಿ ಅನ್ವಯವಾಗುವ ಕೈಗಾರಿಕಾ ಸಂಬಂಧಿತ ಕೆಲಸಗಳಿಗೆ ಅನುಗುಣವಾಗಿ ನಮ್ಮ ಉದ್ಯೋಗಿಗಳ ಮುಕ್ತವಾದ ಒಡಂಬಡಿಕೆಯನ್ನು ಮತ್ತು ಪ್ರತಿನಿಧಿಸುವ ಹಕ್ಕನ್ನು ನಾವು ಒಪ್ಪಿ ಗೌರವಿಸುತ್ತೇವೆ. ಪ್ರತಿನಿಧಿಸುವ ಹಕ್ಕು ವೈಯಕ್ತಿಕವಾದದ್ದೇ ವಿನಃ ಬಾಧ್ಯತೆಯಲ್ಲ ಎಂದು ನಾವು ಭಾವಿಸುತ್ತೇವೆ. ಆದ್ದರಿಂದ, ಪ್ರತಿನಿಧಿಸದಿರುವುದು ಉದ್ಯೋಗಿಗಳ ಆಯ್ಕೆಯಾಗಿದ್ದರೆ ಅದನ್ನು ಮುಕ್ತವಾಗಿ ನಿರ್ಧರಿಸುವ ಹಕ್ಕನ್ನು

ಸೇರಿದಂತೆ ಕೆಲಸದ ಜಾಗದಲ್ಲಿ ಆದ ಗುಂಪುಗಳು ಈ ವಿಷಯದ ಬಗ್ಗೆ ಮುಕ್ತವಾಗಿ ಮಾತನಾಡುವುದನ್ನು ನಾವು ಅನುಮೋದಿಸುತ್ತೇವೆ. ನಮ್ಮ ಉದ್ಯೋಗಿ ಚಾರ್ಟರ್‌ಗೆ ಅನುಗುಣವಾಗಿ ನಮ್ಮ ಉದ್ಯೋಗಿಗಳ ಹಿತಾಸಕ್ತಿಗಳನ್ನು ಕಾಯಲು ಕಾನೂನಿನ ಅಡಿ ಬರುವ ಪ್ರತಿನಿಧಿಗಳೊಂದಿಗೆ ನಾವು ರಚನಾತ್ಮಕವಾಗಿ ಕೆಲಸ ಮಾಡುತ್ತೇವೆ. ಸಹಕಾರ ಮತ್ತು ಪರಸ್ಪರ ಗೌರವ ನೀಡುವ ಗುಣವನ್ನು ಉತ್ತೇಜಿಸಲು ಅನ್ವಯವಾಗುವ ಸ್ಥಳೀಯ ಕಾನೂನು ಮತ್ತು ನಿಬಂಧನೆಗಳನ್ನು ನಾವು ಗೌರವಿಸುತ್ತೇವೆ.

## ಅನುಷ್ಠಾನ ಮತ್ತು ಜವಾಬ್ದಾರಿಗಳು:

ನಮ್ಮ ಕಾರ್ಯಾಚರಣ ಗುಂಪು ಮತ್ತು ವಿಭಾಗಗಳಲ್ಲಿ ಈ ಮಾನದಂಡಗಳ ಅನುಷ್ಠಾನ ಮತ್ತು ಅನುಸರಣೆಯ ಜವಾಬ್ದಾರಿಯ ಮ್ಯಾಗ್ನದ ಆಯಾ ಗುಂಪು ಮತ್ತು ವಿಭಾಗಗಳ ಸೀನಿಯರ್ ಮ್ಯಾನೇಜ್ಮೆಂಟ್ ಮೇಲಿರುತ್ತದೆ. ಈ ಮಾನದಂಡಗಳಿಗೆ ಕಾರ್ಪೊರೇಟ್ ಮೇಲ್ವಿಚಾರಣೆಯನ್ನು ವಿವಿಧ ಮಾನವ ಸಂಪನ್ಮೂಲಗಳ ಲೆಕ್ಕಪರಿಶೋಧನೆ ಮತ್ತು ತಪಾಸಣೆ ಪ್ರಕ್ರಿಯೆಗಳ ಮೂಲಕ ಒದಗಿಸಲಾಗುತ್ತದೆ. ಮ್ಯಾಗ್ನದ ನಿರ್ದೇಶಕರ ಮಂಡಳಿ ಅದರ ಕಾರ್ಪೊರೇಟ್ ಆಡಳಿತ, ಪರಿಹಾರ ಮತ್ತು ನಾಮನಿರ್ದೇಶನ ಸಮಿತಿಯ ಮೂಲಕ, ಈ ಮಾನದಂಡಗಳನ್ನು ಒಳಗೊಂಡಂತೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಎಡೆಗೆ ನಮ್ಮ ಒಟ್ಟಾರೆ ಕೆಲಸದ ಮೇಲ್ವಿಚಾರಣೆ ಮಾಡುತ್ತದೆ. ನಾವು ನಮ್ಮೊಂದಿಗೆ ಕೂಡಿಕೊಂಡಿರುವ ವ್ಯಾಪಾರ ಪಾಲುದಾರರು ಮತ್ತು ಪೂರೈಕೆದಾರಿಗೆ ಇದೇ ರೀತಿಯ ನೀತಿಗಳನ್ನು ಅಳವಡಿಸಿಕೊಳ್ಳಲು ಮತ್ತು ಜಾರಿಗೊಳಿಸಲು ಪ್ರೋತ್ಸಾಹಿಸುತ್ತೇವೆ.  ನಾವು ಈ ಜಾಗತಿಕ ಕಾರ್ಮಿಕ ಮಾನದಂಡಗಳಿಗೆ ಅನುಗುಣವಾಗಿ ತಮ್ಮ ವ್ಯಾಪಾರ ಮತ್ತು ವ್ಯವಹಾರಗಳನ್ನು ನಡೆಸುವ ವ್ಯಾಪಾರ ಪಾಲುದಾರ ಮತ್ತು ಪೂರೈಕೆದಾರರನ್ನು ಗುರುತಿಸಲು ಮತ್ತು ಅವರೊಂದಿಗೆ ವ್ಯವಹರಿಸಲು ಪ್ರಯತ್ನಿಸುತ್ತೇವೆ.

ಈ ತತ್ವಗಳ ಉಲ್ಲಂಘನೆಯಾಗಿರಬಹುದು ಎಂದು ನಂಬುವ ಉದ್ಯೋಗಿಗಳು ಈಗಾಗಲೆ ಇರುವ ಆಂತರಿಕ ದೂರು ಕಾರ್ಯವಿಧಾನಗಳ ಮೂಲಕ ನೀತಿ ಉಲ್ಲಂಘನೆಗಳನ್ನು ಸಾಮರ್ಥ್ಯವಾಗಿ ವರದಿ ಮಾಡಬಹುದು. ಇದು ಪ್ರದೇಶಕ್ಕೆ ಅನುಗುಣವಾಗಿ ಬದಲಾಗುತ್ತದೆ.  ಮ್ಯಾಗ್ನ ಉದ್ಯೋಗಿಗಳಿಗೆ ಹಲವಾರು ಕಳಕಳಿ ಪರಿಹಾರ ಮತ್ತು ತನಿಖಾ ಕಾರ್ಯವಿಧಾನಗಳನ್ನು ಒದಗಿಸುತ್ತದೆ. ಇದರಲ್ಲಿ ನಮ್ಮ ಉದ್ಯೋಗಿ ಚಾರ್ಟರ್ ಓಪನ್ ಡೋರ್ ಪ್ರೊಸೆಸ್ ಜೊತೆಗೆ ಅನ್ವಯವಾಗುವಲ್ಲಿ ನಿಷ್ಪಕ್ಷಪಾತ ತನಿಖೆಗಳನ್ನು ನಡೆಸುವ ಮತ್ತು ಅಗತ್ಯವಿದ್ದಲ್ಲಿ ಪರಿಹಾರ ಕ್ರಮಗಳನ್ನು ಸೂಚಿಸುವ ಉದ್ಯೋಗಿ ಹಾಟ್‌ಲೈನ್ ವ್ಯವಸ್ಥೆ ಕೂಡ ಸೇರಿದೆ. ಮ್ಯಾಗ್ನದ ಪ್ರತೀಕಾರ-ವಿರೋಧಿ ನೀತಿಗೆ ಅನುಗುಣವಾಗಿ, ಅಂತಹ ವರದಿಯನ್ನು ಮಾಡುವ ಅಥವಾ ತನಿಖೆಯಲ್ಲಿ ಸಹಕರಿಸುವ ಯಾವುದೇ ಉದ್ಯೋಗಿಯ ಮೇಲೆ ಯಾವುದೇ ಪ್ರತೀಕಾರದ ಕ್ರಮವನ್ನು ತೆಗೆದುಕೊಳ್ಳಲಾಗುವುದಿಲ್ಲ.

## ಹೆಚ್ಚಿನ ಮಾಹಿತಿಗಾಗಿ:

ಹೆಚ್ಚಿನ ಮಾಹಿತಿಗೆ, ದಯವಿಟ್ಟು ನಿಮ್ಮ ಗುಂಪಿನ ಮಾನವ ಸಂಪನ್ಮೂಲಗಳ ಉಪಾಧ್ಯಕ್ಷರು, ಮ್ಯಾಗ್ನದ ಜಾಗತಿಕ ಕಾರ್ಮಿಕ ಸಂಬಂಧಗಳ ನಿರ್ದೇಶಕರು ಅಥವಾ ಮ್ಯಾಗ್ನದ ಮುಖ್ಯ ಮಾನವ ಸಂಪನ್ಮೂಲ ಅಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಿ.

---


| | |
|---|---|
| Issued: | March 1, 2019 |
| Revised: | February 23, 2022 |
| Next Review: | Q1 2025 |
| Issued By: | Human Resources Legal & Labour Relations Department |
| Approved By: | Magna Compliance Council |